**2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 26**

**ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧಿನಿಯಮ, 2020**

**ಪ್ರಕರಣಗಳ ಪಟ್ಟಿ**

**ಪ್ರಕರಣಗಳು:**


1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಸಾಂಕ್ರಾಮಿಕ ರೋಗವನ್ನು ಅಧಿಸೂಚಿಸಲು ಸರ್ಕಾರದ ಅಧಿಕಾರ
4. ಸಾಂಕ್ರಾಮಿಕ ರೋಗಕ್ಕೆ ವಿಶೇಷ ಕ್ರಮಗಳನ್ನು ತೆಗೆದುಕೊಳ್ಳುವ ಮತ್ತು ವಿನಿಯಮಗಳನ್ನು ನಿರ್ದಿಷ್ಟಪಡಿಸುವ ಅಧಿಕಾರ
5. ಉಲ್ಲಂಘನೆ ಅಥವಾ ಸಾರ್ವಜನಿಕ ನೌಕರನಿಗೆ ಅಡಚಣೆ ಮಾಡುವುದಕ್ಕೆ ನಿಷೇಧ
6. ಸಾರ್ವಜನಿಕ ಅಥವಾ ಖಾಸಗಿ ಸ್ವತ್ತಿಗೆ ಹಾನಿಯುಂಟುಮಾಡುವುದಕ್ಕೆ ನಿಷೇಧ
7. ಸಾರ್ವಜನಿಕ ಅಥವಾ ಖಾಸಗಿ ಸ್ವತ್ತಿಗೆ ಮಾಡಲಾದ ಹಾನಿಗಾಗಿ ನಷ್ಟದ ವಸೂಲಾತಿ
8. ಅಪರಾಧಗಳಿಗೆ ದುಷ್ಪ್ರೇರಣೆ
9. ಅಪರಾಧಗಳ ಸಂಜ್ಞೇಯತೆ, ತನಿಖೆ ಮತ್ತು ವಿಚಾರಣೆ
10. ಕೆಲವು ಅಪರಾಧಗಳ ಸಂಯೋಜನೆ
11. ಅಧಿನಿಯಮವು ಯಾವುದೇ ಇತರ ಕಾನೂನಿಗೆ ಅಲ್ಪೀಕರಣವಾಗುವಂತಿಲ್ಲ
12. ಕೆಲವು ವ್ಯಕ್ತಿಗಳು ಸಾರ್ವಜನಿಕ ನೌಕರರರಾಗಿರುವುದು
13. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ
14. ಕಂಪನಿಗಳಿಂದ ಅಪರಾಧಗಳು
15. ತೊಂದರೆಗಳ ನಿವಾರಣೆಗೆ ಅಧಿಕಾರ
16. ನಿಯಮಗಳ ಮತ್ತು ವಿನಿಯಮಗಳ ರಚನಾಧಿಕಾರ
17. ನಿರಸನ ಮತ್ತು ಉಳಿಸುವಿಕೆ
18. ತಾತ್ಕಾಲಿಕ ಉಪಬಂಧಗಳು

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

**2020 ರ ಕರ್ನಾಟಕ ಅಧಿನಿಯಮ ಸಂಖ್ಯೆ: 26.-** ಕರ್ನಾಟಕ ರಾಜ್ಯದಲ್ಲಿ ಸಾಂಕ್ರಾಮಿಕ ರೋಗಗಳ ನಿಯಂತ್ರಣ ಮತ್ತು ತಡೆಗಟ್ಟುವಿಕೆಗೆ ಸಂಬಂಧಿಸಿದ ಕಾರ್ಯವನ್ನು ನಿರ್ವಹಿಸುತ್ತಿರುವ ಸಾರ್ವಜನಿಕ ನೌಕರರಿಗೆ ಅಡಚಣೆಯುಂಟು ಮಾಡುವುದನ್ನು ಮತ್ತು ಅವರ ವಿರುದ್ಧ ಹಿಂಸಾಕೃತ್ಯ ಎಸಗುವುದನ್ನು ಪ್ರತಿಬಂಧಿಸಲು ಹಾಗೂ ಸಾರ್ವಜನಿಕ ಮತ್ತು ಖಾಸಗಿ ಸ್ವತ್ತಿಗೆ ಹಾನಿಯುಂಟು ಮಾಡುವುದನ್ನು ನಿಷೇಧಿಸಲು, ಅದರಿಂದಾದ ನಷ್ಟವನ್ನು ವಸೂಲು ಮಾಡಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ವಿಷಯಗಳಿಗಾಗಿ ಕಾನೂನುಗಳನ್ನು ಏಕೀಕರಿಸುವುದು ಹಾಗೂ ಕ್ರೋಢೀಕರಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತುಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧ್ಯಾದೇಶ, 2020ನ್ನು (2020ರ ಕರ್ನಾಟಕ ಅಧ್ಯಾದೇಶ 07) ಪ್ರಖ್ಯಾಪಿಸಲಾಗಿತ್ತು.

ಈ ವಿಧೇಯಕವು ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

ಆದ್ದರಿಂದ ಈ ವಿಧೇಯಕ.

[2020ರ ವಿಧಾನಸಭೆಯ ವಿಧೇಯಕ ಸಂಖ್ಯೆ: 44, ಕಡತ ಸಂಖ್ಯೆ: ಸಂವ್ಯಶಾಇ 58 ಶಾಸನ 2020]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 6 ನೇಯ ನಮೂದನೆಯಡಿಯಲ್ಲಿ ಬರುತ್ತದೆ]

**II**

**2021ರ ಅಧಿನಿಯಮ ಸಂಖ್ಯೆ 02.-** ಅಧಿನಿಯಮದ ಅಡಿಯಲ್ಲಿ ಮಾಡಲಾದ ನಿಯಮಗಳು ಮತ್ತು ವಿನಿಯಮಗಳ ಉಲ್ಲಂಘನೆಗಾಗಿ ದಂಡವನ್ನು ವಿಧಿಸುವುದಕ್ಕಾಗಿ ಮತ್ತು ಅಂಥ ಅಪರಾಧಗಳ ರಾಜಿಗಾಗಿ ಉಪಬಂಧಗಳನ್ನು ಕಲ್ಪಿಸಲು ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧಿನಿಯಮ, 2020ನ್ನು (2020ರ ಕರ್ನಾಟಕ ಅಧಿನಿಯಮ 26) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2021ರ ವಿಧಾನಸಭೆಯ ವಿಧೇಯಕ ಸಂಖ್ಯೆ: 03, ಕಡತ ಸಂಖ್ಯೆ: ಸಂವ್ಯಶಾಇ 85 ಶಾಸನ 2020]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 6ನೇ ನಮೂದನೆಯಡಿಯಲ್ಲಿ ಬರುತ್ತದೆ]
[ಕರ್ನಾಟಕ ರಾಜ್ಯ ಪತ್ರದ ಭಾಗ-IVA, ವಿಶೇಷ ಪತ್ರಿಕೆ ಸಂಖ್ಯೆ: 190 ದಿನಾಂಕ: 18.02.2021ರಲ್ಲಿ ಪ್ರಕಟಣೆಗೊಂಡಿದೆ]

# 2020 ರ ಕರ್ನಾಟಕ ಅಧಿನಿಯಮ ಸಂಖ್ಯೆ: 26

(2020 **ರ ಅಕ್ಟೋಬರ್ ತಿಂಗಳ** 19 **ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ**)

# ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧಿನಿಯಮ, 2020

(2020 **ರ ಅಕ್ಟೋಬರ್ ತಿಂಗಳ** 16 **ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ**)

(2021ರ ಅಧಿನಿಯಮ ಸಂಖ್ಯೆ 02ರ ಮೂಲಕ ತಿದ್ದುಪಡಿಯಾದಂತೆ

ಕರ್ನಾಟಕ ರಾಜ್ಯದಲ್ಲಿ ಸಾಂಕ್ರಾಮಿಕ ರೋಗಗಳ ನಿಯಂತ್ರಣ ಮತ್ತು ತಡೆಗಟ್ಟುವಿಕೆಗೆ ಸಂಬಂಧಿಸಿದ ಕಾನೂನುಗಳನ್ನು ಏಕೀಕರಿಸಲು ಮತ್ತು ಕ್ರೋಢೀಕರಿಸಲು ಒಂದು ಅಧಿನಿಯಮ.

ಸಾರ್ವಜನಿಕ ಹಿತಾಸಕ್ತಿಯಲ್ಲಿ ಸಾಂಕ್ರಾಮಿಕ ರೋಗಗಳ ನಿಯಂತ್ರಣ ಮತ್ತು ತಡೆಗಟ್ಟುವಿಕೆಗೆ ಸಂಬಂಧಿಸಿದ ಕಾನೂನುಗಳನ್ನು ಏಕೀಕರಿಸುವುದು ಮತ್ತು ಕ್ರೋಢಿಕರಿಸುವುದು ಯುಕ್ತವಾಗಿರುವುದರಿಂದ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು, ಎಂದರೆ:-

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗತಕ್ಕದ್ದು.

(3) 2ನೇ ಪ್ರಕರಣದ (ಎ) ಖಂಡ, 5ನೇ ಪ್ರಕರಣದ (3), (4) ಮತ್ತು (5)ನೇ ಉಪಪ್ರಕರಣ, 9ನೇ ಪ್ರಕರಣ ಮತ್ತು 10ನೇ ಪ್ರಕರಣ ಇವು ಈ ಕೂಡಲೇ ಜಾರಿಗೆ ಬರತಕ್ಕದ್ದು ಮತ್ತು ಉಳಿದ ಉಪಬಂಧಗಳು 2020ರ ಏಪ್ರಿಲ್ 22ನೇ ದಿನದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಹಿಂಸಾ ಕೃತ್ಯ"ವು ಸಾಂಕ್ರಾಮಿಕ ರೋಗವು ಹರಡಿದ ಅವಧಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸಾರ್ವಜನಿಕ ನೌಕರನ ವಿರುದ್ಧ ಯಾವೊಬ್ಬ ವ್ಯಕ್ತಿಯು ಈ ಮುಂದಿನವುಗಳನ್ನು ಉಂಟುಮಾಡುವ ಅಥವಾ ಉಂಟುವಾಡಬಹುದಾದ ಈ ಮುಂದಿನ ಯಾವುದೇ ಕೃತ್ಯಗಳನ್ನು ಒಳಗೊಳ್ಳುವುದು,-

(i) ಅಂಥ ಸಾರ್ವಜನಿಕ ನೌಕರನ ಜೀವನ ಅಥವಾ ಕಾರ್ಯನಿರ್ವಹಿಸುವ ಸ್ಥಿತಿಗತಿಗಳಿಗೆ ಪರಿಣಾಮವುಂಟುವಾಡುವ ಮತ್ತು ಆತನ ಕರ್ತವ್ಯಗಳನ್ನು ನಿರ್ವಹಿಸುವುದರಿಂದ ಆತನನ್ನು ತಡೆಗಟ್ಟುವಂತೆ ನೀಡುವ ತೊಂದರೆ;

(ii) ಕ್ಲಿನಿಕಲ್ ಸ್ಥಾಪನೆಯ ಆವರಣದ ಒಳಗಾಗಿಯಾಲೀ ಅಥವಾ ಅನ್ಯಥಾ, ಅಂಥ ಸಾರ್ವಜನಿಕ ನೌಕರನ ಜೀವಕ್ಕೆ ಉಂಟುಮಾಡುವ ಹಾನಿ, ಗಾಯ, ನೋವು, ಬೆದರಿಕೆ ಅಥವಾ ಅಪಾಯ;

(iii) ಕ್ಲಿನಿಕಲ್ ಸ್ಥಾಪನೆಯ ಆವರಣದ ಒಳಗಾಗಿಯಾಗಲೀ ಅಥವಾ ಅನ್ಯಥಾ, ಅಂಥ ಸಾರ್ವಜನಿಕ ನೌಕರನಿಗೆ ಆತನು ತನ್ನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಉಂಟುವಾಡುವ ಅಡ್ಡಿ ಅಥವಾ ಅಡಚಣೆ; ಅಥವಾ

(iv) ಅಂಥ ಸಾರ್ವಜನಿಕ ನೌಕರನ ಅಭಿರಕ್ಷೆಯಲ್ಲಿನ ಅಥವಾ ಸಂಬಂಧಿಸಿದ ಯಾವುದೇ ಸ್ವತ್ತು ಅಥವಾ ದಸ್ತಾವೇಜುಗಳಿಗೆ ಉಂಟುವಾಡುವ ನಷ್ಟ ಅಥವಾ ಹಾನಿ;

(ಬಿ) “ಸಾಂಕ್ರಾಮಿಕ ರೋಗಗಳು” ಎಂದರೆ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆಯ ಮೂಲಕ ಸಾಂಕ್ರಾಮಿಕ ರೋಗ ಎಂಬುದಾಗಿ ಘೋಷಿಸಿದ ಯಾವುದೇ ರೋಗ;

(ಸಿ) “ಸರ್ಕಾರ” ಎಂದರೆ, ಕರ್ನಾಟಕ ಸರ್ಕಾರ;

(ಡಿ) “ನಿಯಮಿಸಲಾದುದು” ಎಂದರೆ ಈ ಅಧಿನಿಯಮದ ಅಡಿಯಲ್ಲಿ ಮಾಡಿದ ನಿಯಮಗಳು ಅಥವಾ ವಿನಿಯಮಗಳ ಮೂಲಕ ನಿಯಮಿಸಲಾದುದು;

(ಇ) “ವಿನಿಯಮಗಳು” ಎಂದರೆ ಈ ಅಧಿನಿಯಮದ ಅಡಿಯಲ್ಲಿ ಮಾಡಿದ ವಿನಿಯಮಗಳು; ಮತ್ತು

(ಎಫ್) “ರಾಜ್ಯ” ಎಂದರೆ ಕರ್ನಾಟಕ ರಾಜ್ಯ.

**3. ಸಾಂಕ್ರಾಮಿಕ ರೋಗವನ್ನು ಅಧಿಸೂಚಿಸಲು ಸರ್ಕಾರದ ಅಧಿಕಾರ.-** ಸರ್ಕಾರವು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ರಾಜ್ಯದಾದ್ಯಂತ ಅಥವಾ ಅದರ ಅಂಥ ಭಾಗ ಅಥವಾ ಭಾಗಗಳಲ್ಲಿ, ಈ ಅಧಿನಿಯಮದ ಉದ್ದೇಶಗಳಿಗಾಗಿ ಸಾಂಕ್ರಾಮಿಕ ರೋಗ ಎಂದು ಯಾವುದೇ ರೋಗವನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಅಧಿಸೂಚಿಸಬಹುದು.

**4. ಸಾಂಕ್ರಾಮಿಕ ರೋಗಕ್ಕೆ ವಿಶೇಷ ಕ್ರಮಗಳನ್ನು ತೆಗೆದುಕೊಳ್ಳುವ ಮತ್ತು ವಿನಿಯಮಗಳನ್ನು ನಿರ್ದಿಷ್ಟಪಡಿಸುವ ಅಧಿಕಾರ.-** (1) ರಾಜ್ಯ ಅಥವಾ ಅದರ ಯಾವುದೇ ಭಾಗದಲ್ಲಿ ಯಾವುದೇ ಸಾಂಕ್ರಾಮಿಕ ರೋಗದ ಆಸ್ಫೋಟನೆಯು (outbreak) ಕಂಡು ಬಂದಿದೆ ಅಥವಾ ಭಯಭೀತಗೊಳಿಸಿದೆ ಎಂದು ಯಾವುದೇ ಸಮಯದಲ್ಲಿ ಸರ್ಕಾರಕ್ಕೆ ಮನದಟ್ಟಾದರೆ, ಅಂಥ ರೋಗದ ಆಸ್ಫೋಟನೆ ಅಥವಾ ಅದರ ಹರಡುವಿಕೆಯನ್ನು ತಡೆಗಟ್ಟುವುದಕ್ಕಾಗಿ ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗವು ಪಾಲಿಸಬೇಕಾದ ಅಂಥ ತಾತ್ಕಾಲಿಕ ವಿನಿಯಮಗಳು ಅಥವಾ ಆದೇಶಗಳನ್ನು ನಿರ್ದಿಷ್ಟಪಡಿಸಿ ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಆ ಉದ್ದೇಶಕ್ಕಾಗಿ ಅವಶ್ಯವೆಂದು ಭಾವಿಸುವ ಅಂಥ ಕ್ರಮಗಳನ್ನು ಸರ್ಕಾರವು ಕೈಗೊಳ್ಳಬಹುದು ಹಾಗೂ ಸದರಿ ವಿನಿಯಮಗಳು ಅಥವಾ ಆದೇಶಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಡೆಪ್ಯೂಟಿ ಕಮಿಷನರ್ ಮತ್ತು/ಅಥವಾ ಮುನಿಸಿಪಲ್ ಕಮಿಷನರುಗಳಿಗೆ ಅಗತ್ಯಪಡಿಸಬಹುದು ಅಥವಾ ಅಧಿಕಾರ ನೀಡಬಹುದು.

(2) ವಿಶೇಷವಾಗಿ ಮತ್ತು ಹಿಂದಿನ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಸರ್ಕಾರವು ಕ್ರಮಗಳನ್ನು ತೆಗೆದುಕೊಳ್ಳಬಹುದು ಮತ್ತು ವಿನಿಯಮಗಳನ್ನು ನಿರ್ದಿಷ್ಟಪಡಿಸಬಹುದು,-

(ಎ) ರಾಜ್ಯದೊಳಗೆ ಯಾವುದೇ ಗುಂಪುಗೂಡುವಿಕೆ, ಆಚರಣೆ, ಆರಾಧನೆ ಅಥವಾ ಇತರ ಅಂಥ ಚಟುವಟಿಕೆಗಳಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ ಸಾಂಕ್ರಾಮಿಕ ರೋಗಗಳು ಸಾಕಷ್ಟು ಹರಡುತ್ತಿದೆ ಅಥವಾ ಪ್ರಸರಿಸುತ್ತಿದೆ ಎಂದು ಸರ್ಕಾರವು ಪರಿಗಣಿಸಿದ ಯಾವುದೇ ಬಳಕೆ ಅಥವಾ ಕೃತ್ಯವನ್ನು ನಿಷೇಧಿಸುವುದು;

(ಬಿ) ರಾಜ್ಯದಲ್ಲಿ ವಾಯುಮಾರ್ಗ, ರೈಲು, ರಸ್ತೆ, ಸಮುದ್ರ ಮಾರ್ಗ ಅಥವಾ ಯಾವುದೇ ಇತರ ಮಾರ್ಗಗಳಿಂದ ಪ್ರವೇಶಿಸುವ ವ್ಯಕ್ತಿಗಳನ್ನು ಪರೀಕ್ಷಿಸುವುದು ಅಥವಾ ವಿನಿಯಮ ಅಥವಾ ಆದೇಶಗಳಲ್ಲಿ ಅಧಿಕೃತಗೊಳಿಸಿದ ಅಧಿಕಾರಿಗಳ ಮೂಲಕ ಯಾವುದೇ ಅಂಥ ರೋಗದಿಂದ ಸೋಂಕಿತರೆಂದು ಶಂಕಿತರಾದ ವ್ಯಕ್ತಿಗಳನ್ನು ಆಸ್ಪತ್ರೆಯಲ್ಲಿ, ತಾತ್ಕಾಲಿಕ ತಂಗುದಾಣದಲ್ಲಿ, ನಿವಾಸದಲ್ಲಿ ಅಥವಾ ಅನ್ಯಥಾ ಪ್ರತ್ಯೇಕಗೊಳಿಸುವಿಕೆ (Quarantine) ಅಥವಾ ಬೇರ್ಪಡಿಸುವಿಕೆಯನ್ನು (Isolation) ಮಾಡುವುದು;

(ಸಿ) ಅವಶ್ಯವೆಂದು ಭಾವಿಸಬಹುದಾದ ಅಂಥ ಅವಧಿಗಾಗಿ ರಾಜ್ಯ ಅಥವಾ ಜಿಲ್ಲಾ ಗಡಿಗಳನ್ನು ಮುಚ್ಚುವುದು (Seal);

(ಡಿ) ಸಾರ್ವಜನಿಕ ಮತ್ತು ಖಾಸಗಿ ಸಾರಿಗೆಯ ಕಾರ್ಯಾಚರಣೆಯ ಮೇಲೆ ನಿರ್ಬಂಧಗಳನ್ನು ವಿಧಿಸುವುದು;

(ಇ) ಸಾಮಾಜಿಕ ಅಂತರದ ರೂಢಿಗಳನ್ನು ನಿಯಮಿಸುವುದು;

(ಎಫ್) ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ಧಾರ್ಮಿಕ ಸಂಸ್ಥೆಗಳಲ್ಲಿ ವ್ಯಕ್ತಿಗಳ ಒಗ್ಗೂಡುವಿಕೆಯನ್ನು ನಿರ್ಬಂಧಿಸುವುದು ಅಥವಾ ನಿಷೇಧಿಸುವುದು;

(ಜಿ) ರಾಜ್ಯದಲ್ಲಿ ಸರ್ಕಾರಿ ಮತ್ತು ಖಾಸಗಿ ಕಛೇರಿಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳು ಕಾರ್ಯನಿರ್ವಹಿಸುವುದನ್ನು ನಿಯಂತ್ರಿಸುವುದು ಅಥವಾ ನಿರ್ಬಂಧಿಸುವುದು;

(ಎಚ್) ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳು, ಕಾರ್ಖಾನೆಗಳು, ಕಾರ್ಯಾಗಾರಗಳು ಮತ್ತು ಗೋದಾಮುಗಳ ಕಾರ್ಯನಿವರ್ಹಿಸುವಿಕೆಯ ಮೇಲೆ ನಿಷೇಧ ಅಥವಾ ನಿರ್ಬಂಧಗಳನ್ನು ವಿಧಿಸುವುದು;

(ಐ) ಅತ್ಯಾವಶ್ಯಕ ಅಥವಾ ತುರ್ತು ಸೇವೆಗಳಾದಂಥ ಬ್ಯಾಂಕುಗಳು, ಮಾಧ್ಯಮಗಳು, ಆರೋಗ್ಯ ರಕ್ಷಣೆ, ಆಹಾರ ಸರಬರಾಜು, ವಿದ್ಯುಚ್ಛಕ್ತಿ, ನೀರು, ಇಂಧನ ಇತ್ಯಾದಿಗಳ ಸೇವಾನೀಡಿಕೆ ಅವಧಿಯನ್ನು ನಿರ್ಬಂಧಿಸುವುದು;

(ಜೆ) ಸಾಮಾಜಿಕ, ರಾಜಕೀಯ, ಕ್ರೀಡೆಗಳು, ಮನೋರಂಜನೆ, ಶೈಕ್ಷಣಿಕ, ಸಾಂಸ್ಕೃತಿಕ ಅಥವಾ ಧಾರ್ಮಿಕ ಸಮಾರಂಭಗಳು ಅಥವಾ ಗುಂಪುಗೂಡುವಿಕೆಗಳನ್ನು ನಿರ್ಬಂಧಿಸುವುದು; ಮತ್ತು

(ಕೆ) ಸರ್ಕಾರವು ನಿರ್ಧರಿಸಿದಂತೆ ಸಾಂಕ್ರಾಮಿಕ ರೋಗಗಳ ನಿಯಂತ್ರಣ ಮತ್ತು ತಡೆಗಟ್ಟುವಿಕೆಗಾಗಿ ಅವಶ್ಯವಾಗಬಹುದಾದ ಅಂಥ ಇತರ ಕ್ರಮಗಳು.

**5. ಉಲ್ಲಂಘನೆ ಅಥವಾ ಸಾರ್ವಜನಿಕ ನೌಕರನಿಗೆ ಅಡಚಣೆ ಮಾಡುವುದಕ್ಕೆ ನಿಷೇಧ.-** (1) ಯಾವೊಬ್ಬ ವ್ಯಕ್ತಿ, ಸಂಸ್ಥೆ ಅಥವಾ ಕಂಪನಿಯು 4ನೇ ಪ್ರಕರಣದ ಯಾವುದೇ ಉಪಬಂಧಗಳನ್ನು, ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ನಿಯಮಗಳು, ವಿನಿಯಮ ಅಥವಾ ಆದೇಶವನ್ನು ಉಲ್ಲಂಘಿಸತಕ್ಕದ್ದಲ್ಲ ಅಥವಾ ಅವಿಧೇಯತೆಯನ್ನು ತೋರಿಸತಕ್ಕದ್ದಲ್ಲ (disobey).

(2) ಈ ಅಧಿನಿಯಮದ ಅಥವಾ ಅದರಡಿಯಲ್ಲಿ ಮಾಡಲಾದ ನಿಯಮಗಳು, ವಿನಿಯಮಗಳು ಅಥವಾ ಆದೇಶಗಳ ಯಾವುದೇ ಉಪಬಂಧಗಳ ಅನುಸರಣೆಯಲ್ಲಿ ಕಾರ್ಯನಿರ್ವಿಹಿಸುತ್ತಿರುವ ಅಥವಾ ಕಾರ್ಯನಿರ್ವಹಿಸುತ್ತಿರುವನೆಂದು ತಾತ್ಪರ್ಯವಾಗುವ ಅಥವಾ ಕರ್ತವ್ಯವನ್ನು ನಿರ್ವಹಿಸುತ್ತಿರುವ ಯಾವೊಬ್ಬ ಅಧಿಕಾರಿ ಅಥವಾ ಯಾವೊಬ್ಬ ಸಾರ್ವಜನಿಕ ನೌಕರನಿಗೆ ಯಾವೊಬ್ಬ ವ್ಯಕ್ತಿಯು ಅಡಚಣೆಯನ್ನು ಮಾಡತಕ್ಕದ್ದಲ್ಲ.

(3) ಸಾಂಕ್ರಾಮಿಕ ರೋಗವು ಹರಡಿರುವ ಅವಧಿಯಲ್ಲಿ ಸಾರ್ವಜನಿಕ ನೌಕರನ ವಿರುದ್ಧ ಹಿಂಸಾಚಾರ ಕೃತ್ಯವನ್ನು ಎಸಗುವಲ್ಲಿ ಅಥವಾ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ವತ್ತಿಗೆ ನಷ್ಟ ಉಂಟುಮಾಡುವಲ್ಲಿ ಯಾವೊಬ್ಬ ವ್ಯಕ್ತಿಯು ತೊಡಗತಕ್ಕದ್ದಲ್ಲ.

[1][(3ಎ) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೊಬ್ಬನನ್ನು ನಿಯಮಗಳಲ್ಲಿ ಅಥವಾ ವಿನಿಯಮಗಳಲ್ಲಿ ನಿಯಮಿಸಬಹುದಾದಂತೆ, ಐವತ್ತು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಅಂಥ ಜುಲ್ಮಾನೆಯಿಂದ ಅಥವಾ ಮೂರು ತಿಂಗಳವರೆಗೆ ಅವಧಿಗಾಗಿ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.][1]

(4) [2][xxx][2] (2) ಅಥವಾ (3)ನೇ ಉಪಪ್ರಕರಣದ ಯಾವುದೇ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬನು, ಅಪರಾಧ ನಿರ್ಣಯವಾದಮೇಲೆ, ಮೂರು ತಿಂಗಳಿಗೆ ಕಡಿಮೆಯಲ್ಲದ ಆದರೆ ಐದು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದೊಂದಿಗೆ ಮತ್ತು ಐವತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಎರಡು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದುದಾದ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

(5) ಯಾವೊಬ್ಬನು, ಸಾರ್ವಜನಿಕ ನೌಕರನ ವಿರುದ್ಧ ಹಿಂಸಾ ಕೃತ್ಯವನ್ನು ಎಸಗುವಾಗ, ಭಾರತೀಯ ದಂಡ ಸಂಹಿತೆ, 1860ರ (1860ರ ಕೇಂದ್ರ ಅಧಿನಿಯಮ 45) 320ನೇ ಪ್ರಕರಣದಲ್ಲಿ ಪರಿಭಾಷಿಸಿದಂತೆ ತೀವ್ರತರವಾದ ಹಾನಿಯುಂಟುಮಾಡಿದ್ದಲ್ಲಿ, ಅಂಥ ವ್ಯಕ್ತಿಯು, ಆರು ತಿಂಗಳಿಗೆ ಕಡಿಮೆಯಲ್ಲದ ಆದರೆ ಏಳು ವರ್ಷಗಳ ಅವಧಿಗೆ ವಿಸ್ತರಿಸಬಹುದಾದ ಕಾರಾವಾಸದೊಂದಿಗೆ ಮತ್ತು ಒಂದು ಲಕ್ಷ ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಐದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

1. 2021ರ ಅಧಿನಿಯಮ ಸಂಖ್ಯೆ 02ರ ಮೂಲಕ ದಿನಾಂಕ: 18.02.2021ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2021ರ ಅಧಿನಿಯಮ ಸಂಖ್ಯೆ 02ರ ಮೂಲಕ ದಿನಾಂಕ: 18.02.2021ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**6. ಸಾರ್ವಜನಿಕ ಅಥವಾ ಖಾಸಗಿ ಸ್ವತ್ತಿಗೆ ಹಾನಿಯುಂಟುಮಾಡುವುದಕ್ಕೆ ನಿಷೇಧ.-** (1) ಯಾವುದೇ ಸಾಂಕ್ರಾಮಿಕ ರೋಗದ ನಿಯಂತ್ರಣಕ್ಕಾಗಿ ನಿರ್ಬಂಧಗಳು ಮತ್ತು ವಿನಿಯಮಗಳು ಜಾರಿಯಲ್ಲಿರುವಾಗ ಯಾವುದೇ ಪ್ರದೇಶದಲ್ಲಿ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ವತ್ತಿಗೆ ನಷ್ಟ ಅಥವಾ ಹಾನಿಯುಂಟುಮಾಡುವ ಅಪರಾಧವನ್ನು ಯಾವೊಬ್ಬ ವ್ಯಕ್ತಿಯು ಮಾಡತಕ್ಕದ್ದಲ್ಲ ಅಥವಾ ಮಾಡಲು ಪ್ರಯತ್ನಿಸತಕ್ಕದ್ದಲ್ಲ ಅಥವಾ ಪ್ರಚೋದಿಸತಕ್ಕದ್ದಲ್ಲ, ಕೆರಳಿಸತಕ್ಕದ್ದಲ್ಲ ಅಥವಾ ಅನ್ಯಥಾ ದುಷ್ಪ್ರೇರಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧವನ್ನು ಉಲ್ಲಂಘಿಸುವ ಯಾರೊಬ್ಬನು, ಮೂರು ತಿಂಗಳುಗಳಿಗೆ ಕಡಿಮೆಯಲ್ಲದ ಆದರೆ ಐದು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಗಾಗಿ ಕಾರಾವಾಸದೊಂದಿಗೆ ಮತ್ತು ಐವತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಎರಡು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

**7. ಸಾರ್ವಜನಿಕ ಅಥವಾ ಖಾಸಗಿ ಸ್ವತ್ತಿಗೆ ಮಾಡಲಾದ ಹಾನಿಗಾಗಿ ನಷ್ಟದ ವಸೂಲಾತಿ.-** (1) 5ನೇ ಪ್ರಕರಣ ಅಥವಾ 6ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದಂಡನೆಯ ಜೊತೆಗೆ, ಅಪರಾಧಿಯು ಯಾವುದೇ ಸಾರ್ವಜನಿಕ ನೌಕರನಿಗೆ ಮಾಡಿದ ಹಾನಿ ಅಥವಾ ತೀವ್ರತರ ಹಾನಿಗಾಗಿ ನ್ಯಾಯಾಲಯವು ನಿರ್ಧರಿಸಬಹುದಾದ ಅಂಥ ಮೊತ್ತವನ್ನು ನಷ್ಟಪರಿಹಾರವಾಗಿ ಸಂದಾಯ ಮಾಡಲು ಸಹ ಹೊಣೆಗಾರನಾಗಿರತಕ್ಕದ್ದು.

(2) 10ನೇ ಪ್ರಕರಣದ ಅಡಿಯಲ್ಲಿನ ಅಪರಾಧದ ಸಂಯೋಜನೆಯಿದ್ದಾಗ್ಯೂ, ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ವತ್ತಿಗೆ ಮಾಡಿದ ಹಾನಿ ಮತ್ತು ನಷ್ಟದ ಸಂದರ್ಭದಲ್ಲಿ ಸಂದಾಯ ಮಾಡಬಹುದಾದ ನಷ್ಟಪರಿಹಾರವು, ನ್ಯಾಯಾಲಯವು ನಿರ್ಧರಿಸಬೇಕಾದ ಹಾನಿಗೊಳಗಾದ ಮತ್ತು ನಷ್ಟವನ್ನುಂಟು ಮಾಡಲಾದ ಸ್ವತ್ತಿನ ನ್ಯಾಯಯುತ ಮಾರುಕಟ್ಟೆ ಮೌಲ್ಯದ ಎರಡು ಪಟ್ಟು ಆಗಿರತಕ್ಕದ್ದು.

(3) (1) ಮತ್ತು (2)ನೇ ಉಪಪ್ರಕರಣಗಳ ಅಡಿಯಲ್ಲಿ ತೀರ್ಪುಕೊಡಲಾದ ನಷ್ಟ ಪರಿಹಾರದ ಮೊತ್ತವನ್ನು ಸಂದಾಯ ಮಾಡಲು ವಿಫಲವಾದಲ್ಲಿ ಅಂಥ ಮೊತ್ತವನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12) ಅಡಿಯಲ್ಲಿ ಭೂ ಕಂದಾಯದ ಹಿಂಬಾಕಿಯಂತೆ ವಸೂಲು ಮಾಡತಕ್ಕದ್ದು.

(4) ಅಂಥ ವಸೂಲಾತಿಯ ಮುಂದುವರಿಕೆಯಲ್ಲಿ, ಡೆಪ್ಯೂಟಿ ಕಮಿಷನರನು ಅಧಿಸೂಚನೆಯ ಮೂಲಕ, ಸಕ್ಷಮ ನ್ಯಾಯಾಲಯವು ಅದನ್ನು ನಿರಪಾಧಿಕಗೊಳಿಸುವುದಕ್ಕೆ (absolute) ಒಳಪಟ್ಟು ಆತನ ಸ್ವತ್ತನ್ನು ತಾತ್ಕಾಲಿಕವಾಗಿ ಜೋಡಣೆ ಮಾಡಬಹುದು ಮತ್ತು ಅಂಥ ಬಾಕಿಗಳೆಡೆಗೆ ಸ್ವತ್ತನ್ನು ವಶಪಡಿಸಿಕೊಳ್ಳಲು ಮತ್ತು ಮುಟ್ಟುಗೋಲು ಮಾಡಲು ನಿರ್ದೇಶಿಸಬಹುದು.

**8. ಅಪರಾಧಗಳಿಗೆ ದುಷ್ಪ್ರೇರಣೆ.-** ಈ ಅಧಿನಿಯಮದ ಅಡಿಯಲ್ಲಿ ಯಾವೊಬ್ಬ ವ್ಯಕ್ತಿಯು ಅಪರಾಧಕ್ಕೆ ದುಷ್ಪ್ರೇರಣೆ ಮಾಡಿದರೆ ಮತ್ತು ದುಷ್ಪ್ರೇರಿತ ಕಾರ್ಯವು ದುಷ್ಪ್ರೇರಣೆಯ ತತ್ಪರಿಣಾಮದಿಂದಾಗಿ ಎಸಗಲಾಗಿದ್ದಲ್ಲಿ, ಅಪರಾಧವನ್ನು ಎಸಗಲಾಗಿದೆ ಎಂಬುದಾಗಿ ದಂಡಿತನಾಗತಕ್ಕದ್ದು.

**9. ಅಪರಾಧಗಳ ಸಂಜ್ಞೇಯತೆ, ತನಿಖೆ ಮತ್ತು ವಿಚಾರಣೆ.-** ದಂಡ ಪ್ರಕ್ರಿಯಾ ಸಂಹಿತೆ, 1973ರಲ್ಲಿ (1974ರ ಕೇಂದ್ರ ಅಧಿನಿಯಮ 2) ಏನೇ ಒಳಗೊಂಡಿದ್ದರೂ,-

(i) 5ನೇ ಪ್ರಕರಣ ಅಥವಾ 6ನೇ ಪ್ರಕರಣದ ಅಡಿಯಲ್ಲಿನ ದಂಡನೀಯ ಅಪರಾಧವು ಸಂಜ್ಞೇಯವಾಗಿರತಕ್ಕದ್ದು ಮತ್ತು ಜಾಮೀನು ರಹಿತವಾಗಿರತಕ್ಕದ್ದು;

(ii) 5ನೇ ಪ್ರಕರಣ ಅಥವಾ 6ನೇ ಪ್ರಕರಣದ ಅಡಿಯಲ್ಲಿ ದಾಖಲಾದ ಯಾವುದೇ ಪ್ರಕರಣವನ್ನು ಇನ್ಸ್ ಪೆಕ್ಟರ್ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಪೊಲೀಸ್ ಅಧಿಕಾರಿಯು ತನಿಖೆ ನಡೆಸತಕ್ಕದ್ದು;

(iii) 5ನೇ ಪ್ರಕರಣ ಅಥವಾ 6ನೇ ಪ್ರಕರಣದ ಅಡಿಯಲ್ಲಿ ಪ್ರಕರಣದ ತನಿಖೆಯನ್ನು ಪ್ರಥಮ ವರ್ತಮಾನ ವರದಿಯ ನೋಂದಾಯಿತ ದಿನಾಂಕದಿಂದ ಮೂವತ್ತು ದಿವಸಗಳ ಅವಧಿಯೊಳಗಾಗಿ ಪೂರ್ಣಗೊಳಿಸತಕ್ಕದ್ದು;

(iv) 5ನೇ ಪ್ರಕರಣ ಅಥವಾ 6ನೇ ಪ್ರಕರಣದ ಅಡಿಯಲ್ಲಿ ಪ್ರಕರಣದ ಪ್ರತಿಯೊಂದು ತನಿಖೆ ಅಥವಾ ವಿಚಾರಣೆಯಲ್ಲಿ, ಸಾಧ್ಯವಾದಷ್ಟು ಶೀಘ್ರವಾಗಿ ವ್ಯವಹರಣೆಗಳನ್ನು ನಡೆಸತಕ್ಕದ್ದು, ಮತ್ತು ನಿರ್ದಿಷ್ಟವಾಗಿ, ಒಮ್ಮೆ ಸಾಕ್ಷಿಗಳ ಪಾಟೀಸವಾಲು ಆರಂಭವಾದಾಗ, ನ್ಯಾಯಾಲಯವು ದಾಖಲಿಸಬೇಕಾದ ಕಾರಣಗಳಿಗಾಗಿ ಅದನ್ನು ಮುಂದಿನ ದಿನಕ್ಕೆ ಮುಂದೂಡುವುದನ್ನು ನಿರ್ಣಯಿಸಿದ (find) ಹೊರತು, ಹಾಜರುಪಡಿಸಿದ ಎಲ್ಲಾ ಸಾಕ್ಷಿಗಳ ಪಾಟೀಸವಾಲಿನವರೆಗೆ ದಿನದಿಂದ ದಿನಕ್ಕೆ (from day to day) ಅದನ್ನು ಮುಂದುವರೆಸತಕ್ಕದ್ದು, ಹಾಗೂ ತನಿಖೆ ಅಥವಾ ವಿಚಾರಣೆಯು ಒಂದು ವರ್ಷದ ಅವಧಿಯೊಳಗಾಗಿ ಮುಕ್ತಾಯಗೊಳ್ಳುವುದನ್ನು ಖಚಿತಪಡಿಸಿಕೊಳ್ಳುವ ಪ್ರಯತ್ನವನ್ನು ಮಾಡತಕ್ಕದ್ದು:

ಪರಂತು, ಸದರಿ ಅವಧಿಯೊಳಗಾಗಿ ವಿಚಾರಣೆಯು ಮುಕ್ತಾಯಗೊಳ್ಳದಿದ್ದರೆ, ಹಾಗೆ ಮಾಡಲಾಗದಿದ್ದಕ್ಕೆ ಕಾರಣಗಳನ್ನು ನ್ಯಾಯಾಧೀಶರು ದಾಖಲಿಸತಕ್ಕದ್ದು:

ಮತ್ತು ಪರಂತು, ಸದರಿ ಅವಧಿಯನ್ನು ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ, ಒಂದು ಬಾರಿಗೆ ಆದರೆ ಆರು ತಿಂಗಳುಗಳಿಗೆ ಮೀರದಿರುವ ಅಂಥ ಮುಂದುವರಿದ ಅವಧಿಗೆ ವಿಸ್ತರಿಸಬಹುದು.

[1]**[10. ಕೆಲವು ಅಪರಾಧಗಳ ರಾಜಿ.-** (1) ಕರ್ನಾಟಕ ಸಾಂಕ್ರಾಮಿಕ ರೋಗಗಳ (ತಿದ್ದುಪಡಿ) ಅಧಿನಿಯಮ, 2020ರ (2020ರ ಕರ್ನಾಟಕ ಅಧಿನಿಯಮ 26) ಪ್ರಾರಂಭಕ್ಕೆ ಮೊದಲು ಅಥವಾ ತರುವಾಯ, 5ನೇ ಪ್ರಕರಣದ (3ಎ) ಉಪಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಎಸಗಿದ್ದು, ಪ್ರಾರಂಭಿಸುವುದಕ್ಕೆ ಮೊದಲಾಗಲೀ ಅಥವಾ ತರುವಾಯವಾಗಲೀ, ಸರ್ಕಾರವು ಅಧಿಸೂಚಿಸಿದ ಅಂಥ ಮೊತ್ತವನ್ನು ಪಾವತಿಸಿದ ಮೇರೆಗೆ, ಸರ್ಕಾರವು ಪ್ರಾಧಿಕೃತಗೊಳಿಸಿದಂಥ ಅಧಿಕಾರಿಯು, ರಾಜಿ ಮಾಡಬಹುದು. ಅಂಥ ರಾಜಿಯಾದಾಗ, ಅಪರಾಧಿಯು ವಶದಲ್ಲಿದ್ದಲ್ಲಿ ಆತನನ್ನು ಬಿಡುಗಡೆಗೊಳಿಸತಕ್ಕದ್ದು ಮತ್ತು ಅಂಥ ಅಪರಾಧದ ಸಂಬಂಧದಲ್ಲಿ ಆತನ ವಿರುದ್ಧ ಯಾವುದೇ ಮುಂದಿನ ವ್ಯವಹರಣೆಗಳನ್ನು ನಡೆಸತಕ್ಕದ್ದಲ್ಲ.

(2) 5ನೇ ಪ್ರಕರಣದ (4)ನೇ ಉಪಪ್ರಕರಣದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧವನ್ನು, ಕರ್ನಾಟಕ ಸಾಂಕ್ರಾಮಿಕ ರೋಗಗಳ (ತಿದ್ದುಪಡಿ) ಅಧಿನಿಯಮ, 2020ರ ಪ್ರಾರಂಭಕ್ಕೆ ಮೊದಲು ಅಥವಾ ತರುವಾಯ, ನ್ಯಾಯಾಲಯದ ಅನುಮತಿಯೊಂದಿಗೆ, ಅಂಥ ಹಿಂಸಾಕೃತ್ಯವು ಯಾರ ಮೇಲಾಗಿದೆಯೋ ಆ ವ್ಯಕ್ತಿಯ ಮೂಲಕ ರಾಜಿ ಮಾಡಬಹುದು.][1]

1. 2021ರ ಅಧಿನಿಯಮ ಸಂಖ್ಯೆ 02ರ ಮೂಲಕ ದಿನಾಂಕ: 18.02.2021ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**11. ಅಧಿನಿಯಮವು ಯಾವುದೇ ಇತರ ಕಾನೂನಿಗೆ ಅಲ್ಪೀಕರಣವಾಗುವಂತಿಲ್ಲ.-** ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳಿಗೆ ಹೆಚ್ಚುವರಿಯಾಗಿರತಕ್ಕದ್ದು ಆದರೆ ಅಲ್ಪೀಕರಣಗೊಳ್ಳತಕ್ಕದ್ದಲ್ಲ.

**12. ಕೆಲವು ವ್ಯಕ್ತಿಗಳು ಸಾರ್ವಜನಿಕ ನೌಕರರರಾಗಿರುವುದು.–** ಈ ಅಧಿನಿಯಮದ ಯಾವುವೇ ಉಪಬಂಧಗಳ ಅನುಸರಣೆಯಲ್ಲಿ ಕಾರ್ಯವನ್ನು ಕೈಗೊಂಡಿದ್ದಾರೆ ಅಥವಾ ಕಾರ್ಯವನ್ನು ಕೈಗೊಂಡಿದ್ದಾರೆ ಎಂದು ತಾತ್ಪರ್ಯವಾಗುವ ಎಲ್ಲಾ ಅಧಿಕಾರಿಗಳು, ನೌಕರರು ಮತ್ತು ಇತರ ವ್ಯಕ್ತಿಗಳನ್ನು ಭಾರತ ದಂಡ ಸಂಹಿತೆ (1860ರ ಕೇಂದ್ರ ಅಧಿನಿಯಮ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಸಾರ್ವಜನಿಕ ನೌಕರರೆಂದು ಭಾವಿಸತಕ್ಕದ್ದು.

**13. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಮೂಲಕ ಅಥವಾ ಅದರಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಬೇಕೆಂದು ಉದ್ದೇಶಿಸಲಾದ ಯಾವುದಕ್ಕಾದರೂ, ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**14. ಕಂಪನಿಗಳಿಂದ ಅಪರಾಧಗಳು.-** (1) ಈ ಅಧಿನಿಯಮದ ಅಡಿಯಲ್ಲಿ ಅಪರಾಧವನ್ನು ಒಂದು ಕಂಪನಿಯು ಮಾಡಿದ್ದಲ್ಲಿ, ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ವ್ಯವಹರಣೆಗಳ ನಿರ್ವಹಣೆಗಾಗಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಕಂಪನಿಯನ್ನು ಆ ಅಪರಾಧದ ದೋಷಿಯೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವರ ವಿರುದ್ದದ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವನ್ನು ತಡೆಗಟ್ಟಲು ತಾನು ಯಥೋಚಿತವಾದ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ಯಾವೊಬ್ಬ ವ್ಯಕ್ತಿಯು ರುಜುವಾತುಪಡಿಸಿದರೆ, ಈ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಯಾವುದೇ ಶಿಕ್ಷೆಗೆ ಅಂಥ ವ್ಯಕ್ತಿಯನ್ನು ಗುರಿಯಾಗುವಂತೆ ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿಯ ಒಂದು ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವೊಬ್ಬ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಅಥವಾ ಅವನ ಕಡೆಯಿಂದಾದ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ಸಂಭವಿಸಿತೆಂದು ಹೇಳಬಹುದಾದರೆ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಬಗ್ಗೆ ದೋಷಿಯೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ತನ್ನ ವಿರುದ್ದದ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

**ವಿವರಣೆ**.- ಈ ಪ್ರಕರಣದ ಉದ್ದೇಶಕ್ಕಾಗಿ,-

(ಎ) "ಕಂಪನಿ" ಎಂದರೆ, ಒಂದು ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) "ನಿರ್ದೇಶಕ" ಎಂದರೆ, ಒಂದು ಫರ್ಮಿನ ಸಂಬಂಧದಲ್ಲಿ ಫರ್ಮಿನ ಒಬ್ಬ ಪಾಲುದಾರ.

**15. ತೊಂದರೆಗಳ ನಿವಾರಣೆಗೆ ಅಧಿಕಾರ**.– ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ, ಯಾವುದೇ ತೊಂದರೆ ಉದ್ಭವಿಸಿದರೆ, ಆ ತೊಂದರೆಯ ನಿವಾರಣೆಗಾಗಿ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದ, ತಾನು ಅವಶ್ಯಕ ಮತ್ತು ಯುಕ್ತವೆಂದು ಅಭಿಪ್ರಾಯಪಡುವಂಥ ಉಪಬಂಧಗಳನ್ನು ಸರ್ಕಾರವು ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಮಾಡಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

**16. ನಿಯಮಗಳ ಮತ್ತು ವಿನಿಯಮಗಳ ರಚನಾಧಿಕಾರ**.- (1) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಉತ್ತರಾನ್ವಯವಾಗಿಯಾಗಲೀ ಅಥವಾ ಪೂರ್ವಾನ್ವಯವಾಗಿಯಾಗಲೀ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮ ಮತ್ತು ವಿನಿಯಮವನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ಅದನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮೊದಲು ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮೊದಲು ಆ ನಿಯಮ ಅಥವಾ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಿದಲ್ಲಿ ಮತ್ತು/ಅಥವಾ ಮಾಡಕೂಡದೆಂದು ಉಭಯಸದನಗಳು ನಿರ್ಧರಿಸಿದಲ್ಲಿ, ಅದರ ತರುವಾಯ ಆ ನಿಯಮ ಅಥವಾ ವಿನಿಯಮವು ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ, ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮ ಅಥವಾ ವಿನಿಯಮದ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

**17. ನಿರಸನ ಮತ್ತು ಉಳಿಸುವಿಕೆ**.– (1) ಸಾಂಕ್ರಾಮಿಕ ರೋಗಗಳ ಅಧಿನಿಯಮ, 1897ನ್ನು (1897ರ ಮೈಸೂರು ಅಧಿನಿಯಮ II) ಮತ್ತು ಹೈದರಾಬಾದ್ ಸೋಂಕು ರೋಗಗಳ ಅಧಿನಿಯಮ, 1950ನ್ನು (1950ರ ಹೈದರಾಬಾದ್ ಅಧಿನಿಯಮ XII) ಹಾಗೂ ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧ್ಯಾದೇಶ, 2020ನ್ನು (2020ರ ಕರ್ನಾಟಕ ಅಧ್ಯಾದೇಶ ಸಂ. 07) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ, ಸಾಂಕ್ರಾಮಿಕ ರೋಗಗಳ ಅಧಿನಿಯಮ, 1897ರ (1897ರ ಕೇಂದ್ರ ಅಧಿನಿಯಮ 3) ಉಪಬಂಧಗಳು ಕರ್ನಾಟಕ ರಾಜ್ಯಕ್ಕೆ ಅನ್ವಯವಾಗತಕ್ಕದ್ದಲ್ಲ.

(3) ಅಂಥ ನಿರಸನದಲ್ಲಿ ಏನೇ ಒಳಗೊಂಡಿದ್ದರೂ, ಸಾಂಕ್ರಾಮಿಕ ರೋಗಗಳ ಅಧಿನಿಯಮ, 1897ರ (1897ರ ಮೈಸೂರು ಅಧಿನಿಯಮ II) ಮತ್ತು ಹೈದರಾಬಾದ್ ಸೋಂಕು ರೋಗಗಳ ಅಧಿನಿಯಮ, 1950ರ (1950ರ ಹೈದರಾಬಾದ್ ಅಧಿನಿಯಮ XII) ಮತ್ತು ಸಾಂಕ್ರಾಮಿಕ ರೋಗಗಳ ಅಧಿನಿಯಮ, 1897ರ (1897ರ ಕೇಂದ್ರ ಅಧಿನಿಯಮ 3) ಹಾಗೂ ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧ್ಯಾದೇಶ, 2020ರ (2020ರ ಕರ್ನಾಟಕ ಅಧ್ಯಾದೇಶ ಸಂ. 07) ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯ ಅಥವಾ ಮಾಡಲಾಗಿದೆ ಎಂದು ಭಾವಿಸುವ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸುವ ಯಾವುದೇ ಕ್ರಮವನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

**18. ತಾತ್ಕಾಲಿಕ ಉಪಬಂಧಗಳು**.- ಅಂಥ ನಿರಸನದಲ್ಲಿ ಏನೇ ಒಳಗೊಂಡಿದ್ದರೂ ನಿರಸಿತ ಅಧಿನಿಯಮಗಳ ಮತ್ತು ಅಧ್ಯಾದೇಶದ ಅಡಿಯಲ್ಲಿ ಮಾಡಲಾದ ಯಾವುದೇ ನಿಯಮ, ವಿನಿಯಮ, ಅಧಿಸೂಚನೆ ಅಥವಾ ಆದೇಶವು ಈ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಎಂಬುದಾಗಿ ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಈ ಅಧಿನಿಯಮದ ಅಡಿಯಲ್ಲಿ ಹೊಸ ನಿಯಮಗಳನ್ನು ರಚಿಸುವವರೆಗೂ, ತಿದ್ದುಪಡಿ ಮಾಡುವವರೆಗೂ ಅಥವಾ ಬದಲಾಯಿಸುವವರೆಗೂ ಅವು ಮುಂದುವರೆಯತಕ್ಕದ್ದು.

**ವಜುಬಾಯಿ ವಾಲ**
**ಕರ್ನಾಟಕ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

## 2021 ರ ಕರ್ನಾಟಕ ಅಧಿನಿಯಮ ಸಂಖ್ಯೆ: 02

(2021 ರ ಫೆಬ್ರುವರಿ ತಿಂಗಳ 18ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಸಾಂಕ್ರಾಮಿಕ ರೋಗಗಳ (ತಿದ್ದುಪಡಿ) ಅಧಿನಿಯಮ, 2020

(2021 ರ ಫೆಬ್ರುವರಿ ತಿಂಗಳ 17ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧಿನಿಯಮ, 2020ನ್ನು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧಿನಿಯಮ, 2020ನ್ನು (2020ರ ಕರ್ನಾಟಕ ಅಧಿನಿಯಮ 26) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸಾಂಕ್ರಾಮಿಕ ರೋಗಗಳ (ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 5ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 26) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 5ನೇ ಪ್ರಕರಣದಲ್ಲಿ,-

(i) (3)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ:-

"(3ಎ) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೊಬ್ಬನನ್ನು ನಿಯಮಗಳಲ್ಲಿ ಅಥವಾ ವಿನಿಯಮಗಳಲ್ಲಿ ನಿಯಮಿಸಬಹುದಾದಂತೆ, ಐವತ್ತು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಅಂಥ ಜುಲ್ಮಾನೆಯಿಂದ ಅಥವಾ ಮೂರು ತಿಂಗಳವರೆಗೆ ಅವಧಿಗಾಗಿ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು."

(ii) (4)ನೇ ಉಪಪ್ರಕರಣದಲ್ಲಿ, "(1)" ಎಂಬ ಆವರಣ ಚಿಹ್ನೆಗಳು ಮತ್ತು ಅಂಕಿಯನ್ನು ಬಿಟ್ಟುಬಿಡತಕ್ಕದ್ದು.

**3. 10ನೇ ಪ್ರಕರಣದ ಪ್ರತಿಯೋಜನೆ.-** ಮೂಲ ಅಧಿನಿಯಮದ 10ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**"10. ಕೆಲವು ಅಪರಾಧಗಳ ರಾಜಿ.-** ಕರ್ನಾಟಕ ಸಾಂಕ್ರಾಮಿಕ ರೋಗಗಳ (ತಿದ್ದುಪಡಿ) ಅಧಿನಿಯಮ, 2020ರ (2020ರ ಕರ್ನಾಟಕ ಅಧಿನಿಯಮ 26) ಪ್ರಾರಂಭಕ್ಕೆ ಮೊದಲು ಅಥವಾ ತರುವಾಯ, 5ನೇ ಪ್ರಕರಣದ (3ಎ) ಉಪಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಎಸಗಿದ್ದು, ಪ್ರಾರಂಭಿಸುವುದಕ್ಕೆ ಮೊದಲಾಗಲೀ ಅಥವಾ ತರುವಾಯವಾಗಲೀ, ಸರ್ಕಾರವು ಅಧಿಸೂಚಿಸಿದ ಅಂಥ ಮೊತ್ತವನ್ನು ಪಾವತಿಸಿದ ಮೇರೆಗೆ, ಸರ್ಕಾರವು ಪ್ರಾಧಿಕೃತಗೊಳಿಸಿದಂಥ ಅಧಿಕಾರಿಯು, ರಾಜಿ ಮಾಡಬಹುದು. ಅಂಥ ರಾಜಿಯಾದಾಗ, ಅಪರಾಧಿಯು ವಶದಲ್ಲಿದ್ದಲ್ಲಿ ಆತನನ್ನು ಬಿಡುಗಡೆಗೊಳಿಸತಕ್ಕದ್ದು ಮತ್ತು ಅಂಥ ಅಪರಾಧದ ಸಂಬಂಧದಲ್ಲಿ ಆತನ ವಿರುದ್ಧ ಯಾವುದೇ ಮುಂದಿನ ವ್ಯವಹರಣೆಗಳನ್ನು ನಡೆಸತಕ್ಕದ್ದಲ್ಲ.

(2) 5ನೇ ಪ್ರಕರಣದ (4)ನೇ ಉಪಪ್ರಕರಣದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧವನ್ನು, ಕರ್ನಾಟಕ ಸಾಂಕ್ರಾಮಿಕ ರೋಗಗಳ (ತಿದ್ದುಪಡಿ) ಅಧಿನಿಯಮ, 2020ರ ಪ್ರಾರಂಭಕ್ಕೆ ಮೊದಲು ಅಥವಾ ತರುವಾಯ, ನ್ಯಾಯಾಲಯದ ಅನುಮತಿಯೊಂದಿಗೆ, ಅಂಥ ಹಿಂಸಾಕೃತ್ಯವು ಯಾರ ಮೇಲಾಗಿದೆಯೋ ಆ ವ್ಯಕ್ತಿಯ ಮೂಲಕ ರಾಜಿ ಮಾಡಬಹುದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ